ಜೋಳಿಗೆ ಕೊಟ್ಟು, ಮೇಲಕೆ ಹಾರಿದ
ಬೆಳ್ಳಿಯ ರಥಕೆ ಚಂದ್ರಣ್ಣ
ಪಿಳಿಪಿಳಿ ಕಣ್ಣನು ಬಿಟ್ಟನು ತಿಮ್ಮ,
ಚಿವುಟಿಗೊಂಡನು ತನ್ನನ್ನ!

## 2

'ಜೋಳಿಗೆಯಣ್ಣಾ, ಜೋಳಿಗೆಯಣ್ಣಾ
ತಡೆಯಲಾರೆ ಚಳಿ; ಕೊಡು ರಗ್ಗು'
ಥಕ್ಕನೆ ಬಂದಿತು ಬೆಚ್ಚನೆ ರಗ್ಗು
ತಿಮ್ಮನಿಗಾಯಿತು ಬಲು ಹಿಗ್ಗು.


ಮರುದಿನ ತಿಮ್ಮ: 'ಜೋಳಿಗೆಯಣ್ಣಾ
ಚುರುಚುರುಗುಟ್ಟುತ್ತಿದೆ ಹೊಟ್ಟೆ;
ಕೊಡು ಉಪ್ಪಿಟ್ಟು' – ಎಂದ ಕೂಡಲೇ
ಬಂದಿತು ಉಪ್ಪಿಟ್ಟಿನ ತಟ್ಟೆ.

ಹೀಗೆ ನಡೆಯಿತು ತಿಮ್ಮನ ಬದುಕು
ದುಡಿಯದೆ, ಬೆವರೇ ಸುರಿಸದೆಲೆ;
ಮಡದಿ ಬಂದಳು; ಒಡವೆ ಬಂದವು
ಜೋಪಡಿಯಾಯಿತು ಬಂಗಲೆ!

ದೊಡ್ಡ ಬಂಗಲೆ! ಕೆಲಸಕೆ ಆಳು
ನಡೆಯಿತು ತಿಮ್ಮನ ದರ್ಬಾರು
ಆದರೆ... ಪಾಪ, ಮಕ್ಕಳೆ ಇಲ್ಲ
ತಿಮ್ಮಿ, ತಿಮ್ಮರಿಗೆ ಬೇಜಾರು.

ಗಂಡ ಹೆಂಡತಿ ಒಟ್ಟಿಗೆ ಕುಳಿತು
ಆ ಕುರಿತೇ ಮಾತಾಡಿದರು
ಜೋಳಿಗೆಯಣ್ಣಗೆ ಪೂಜೆಯ ಮಾಡಿ
ಮಕ್ಕಳಿಗಾಗಿ ಬೇಡಿದರು.

ತಿಮ್ಮ ಕೇಳಿದ: 'ಕೊಡು ನಮಗೊಂದು
ಮುದ್ದಾಗಿರುವ ಗಂಡು ಮಗು'.




ತಿಮ್ಮಿಯೆಂದಳು: 'ಹೆಣ್ಣೂ ಇರಲಿ,
ಮನೆಯ ತುಂಬಿರಲಿ ಅದರ ನಗು!'

ತಿಮ್ಮ ತಿಮ್ಮಿಯರು ಒಂದೇ ಬಾರಿ
ಕೇಳಿಬಿಟ್ಟರು ಎರಡು ವರ!
ಅಯ್ಯೋ ದೇವರೆ! ಜೋಳಿಗೆ ಕರಗಿತು
ಬೆಳಗಿನ ಮಂಜಿನ ಮಣಿಯ ತೆರ!

ಇದ್ದಕಿದ್ದಂತೆ ಮಾಯವಾದವು
ಬಂಗಲೆ, ಒಡವೆ, ಮನೆಯಾಳು
ಮಣ್ಣಿನ ಜೋಪಡಿ ಮಾತ್ರ ಉಳಿಯಿತು
ಮರುಕಳಿಸಿತು ಹಿಂದಿನ ಗೋಳು!

ಬಾನಿನ ಬೀದಿಗೆ ಬಂದಿಳಿದಿತ್ತು
ಥಳಥಳ ಬೆಳುದಿಂಗಳ ತೇರು!
ಚಂದಿರ ನೋಡಿದ ತಿಮ್ಮನ ಪಾಡು
ಅವನಿಗೆ ಬಂತು ಕಣ್ಣೀರು!

ಶ್ರೀನಿವಾಸ ಉಡುಪರ ಪ್ರಕಟಣೆಗೆ ಸಿದ್ಧವಾಗಿರುವ ಮಕ್ಕಳ ಕವಿತೆಗಳ ಸಂಕಲನದಿಂದ ಆಯ್ದ ಪದ್ಯ